**ಆರ್‌ಬಿಐ ಸಂ ೯೩/೨೦೦೬-೦೭**

ಡಿಸಿಎಂ (ಇನ್‌ಇ) ಸಂಖ್ಯೆ. ೭೩೨/೦೮.೦೭.೧೮/೨೦೦೨-೦೩

೨೮ನೇ ಜುಲೈ, ೨೦೦೬

ಗೆ,

ಎಲ್ಲ ಸಾರ್ವಜನಿಕ ವಲಯದ ಮತ್ತು ಖಾಸಗಿ ವಲಯದ ಬ್ಯಾಂಕುಗಳ,
ವಿದೇಶೀ ಬ್ಯಾಂಕುಗಳ ಮತ್ತು ರಾಜ್ಯ ಸಹಕಾರಿ ಬ್ಯಾಂಕುಗಳ ಅಧ್ಯಕ್ಷರು ಮತ್ತು
ವ್ಯವಸ್ಥಾಪಕ ನಿರ್ದೇಶಕರು.

ಮಾನ್ಯರೇ,

**ಪ್ರಧಾನ ಸುತ್ತೋಲೆ- ನೋಟುಗಳು ಮತ್ತು ನಾಣ್ಯಗಳ ವಿನಿಮಯ ಸೌಲಭ್ಯ**

ನಮ್ಮ ಪತ್ರ ಡಿಸಿಎಂ (ಇನ್‌ಇ) ಸಂಖ್ಯೆ. ಜಿ-೨/೦೮.೦೭.೧೮/೨೦೦೨-೦೩. ದಿನಾಂಕ ಜುಲೈ ೫, ೨೦೦೨ ರ ಮೇರೆಗೆ ಹೊರಡಿಸಲಾಗಿರುವ ನೋಟುಗಳು ಮತ್ತು ನಾಣ್ಯಗಳ ವಿನಿಮಯಕ್ಕಾಗಿ ಇರುವ ಸೌಲಭ್ಯಗಳಿಗೆ ಸಂಬಂಧಪಟ್ಟ ಪ್ರಧಾನ ಸುತ್ತೋಲೆಯನ್ನು ದಯವಿಟ್ಟು ನೋಡಿ ಸದರಿ ವಿಷಯದಲ್ಲಿ ತರಲಾಗಿರುವ ಬದಲಾವಣೆಗಳಿಗೆ ಅನುಸಾರವಾಗಿ ವಿಷಯ ಕುರಿತ ಒಂದು ಪರಿಷ್ಕೃತ ಪ್ರಧಾನ ಸುತ್ತೋಲೆಯನ್ನು ನಿಮ್ಮ ಮಾಹಿತಿಗಾಗಿ ಮತ್ತು ಅಗತ್ಯವಾದಲ್ಲಿ ಯುಕ್ತ ಕ್ರಮ ಕೈಗೊಳ್ಳುವ ಸಲುವಾಗಿ ನಾವು ಕಳುಹಿಸಿಕೊಡುತ್ತಿದ್ದೇವೆ.

ತಮ್ಮ ವಿಶ್ವಾಸಿ,

**(ಯು.ಎಸ್. ಪಾಲಿವಾಲ್)**
**ಮುಖ್ಯ ಪ್ರಧಾನ ವ್ಯವಸ್ಥಾಪಕ.**

## ಭಾರತೀಯ ರಿಸರ್ವ್ ಬ್ಯಾಂಕ್ (ನೋಟು ಮರುಪಾವತಿ) ನಿಯಮಗಳು ಪೂರ್ಣ ಅಧಿಕಾರಿಗಳ ಪ್ರತ್ಯಾಯೋಜನೆ

ಭಾರತೀಯ ರಿಸರ್ವ್ ಬ್ಯಾಂಕ್ ಕಾಯಿದೆ, ೧೯೩೪ರ ೫೮(೨) ನೇ ಪ್ರಕರಣದೊಂದಿಗೆ ಓದಿಕೊಳ್ಳಲಾದ ೨೮ನೇ ಪ್ರಕರಣದ ಅನ್ವಯ, ಯಾರೇ ವ್ಯಕ್ತಿಯು, ಯಾವುದೇ ಕಳೆದುಹೋಗಿರುವ, ಕಳುವಾಗಿರುವ, ವಿರೂಪಗೊಂಡಿರುವ ಅಥವಾ ಅಪರಿಪೂರ್ಣವಾಗಿರುವಂಥ, ಭಾರತ ಸರ್ಕಾರದ ಕರೆನ್ಸಿ ನೋಟಿನ ಅಥವಾ ಬ್ಯಾಂಕ್ ನೋಟಿನ ಮೌಲ್ಯವನ್ನು ಒಂದು ಹಕ್ಕು ಎಂಬಂತೆ ಭಾರತ ಸರ್ಕಾರದಿಂದ ಅಥವಾ ಆರ್‌ಬಿಐನಿಂದ ವಸೂಲು ಮಾಡಲು ಹಕ್ಕು ಹೊಂದಿರತಕ್ಕದ್ದಲ್ಲ. ಆದರೂ, ನೈಜ ಪ್ರಕರಣಗಳಲ್ಲಿ, ಸಾರ್ವಜನಿಕರಿಗಾಗುತ್ತಿರುವ ತೊಂದರೆಗಳನ್ನು ಕಡಿಮೆ ಮಾಡುವ ದೃಷ್ಟಿಯಿಂದ, ಭಾರತೀಯ ರಿಸರ್ವ್ ಬ್ಯಾಂಕ್, ಕೇಂದ್ರ ಸರ್ಕಾರದ ಪೂರ್ವ ಮಂಜೂರಾತಿ ಪಡೆದು, ಒಂದು ರಿಯಾಯಿತಿಯ ವಿಷಯವೆಂಬಂತೆ, ಅಂಥ ಕರೆನ್ಸಿ ನೋಟುಗಳ ಅಥವ ಬ್ಯಾಂಕು ನೋಟುಗಳ ಮೌಲ್ಯವನ್ನು ಯಾವ ಸಂದರ್ಭಗಳಲ್ಲಿ ಮತ್ತು ಯಾವ ಷರತ್ತುಗಳು ಮತ್ತು ಪರಿಮಿತಿಗಳಿಗೆ ಒಳಪಟ್ಟು ಮರುಪಾವತಿ ಮಾಡಬಹುದೋ ಆ ಸಂದರ್ಭಗಳನ್ನು ನಿಬಂಧನೆಗಳನ್ನು ಮತ್ತು ಪರಿಮಿತಿಗಳನ್ನು ಗೊತ್ತುಪಡಿಸಬಹುದೆಂದು ಉಪಬಂಧಿಸಿದೆ.

ಸಾರ್ವಜನಿಕರ ಪ್ರಯೋಜನ ಮತ್ತು ಅನುಕೂಲಕ್ಕಾಗಿ ಸೌಲಭ್ಯವನ್ನು ವಿಸ್ತರಿಸುವ ದೃಷ್ಟಿಯಿಂದ, ಕರೆನ್ಸಿ ಭಂಡಾರವುಳ್ಳ ಎಲ್ಲ ಶಾಖೆಗಳಿಗೆ, ಹರಿದುಹೋದ/ವಿರೂಪಗೊಂಡ/ದೋಷಯುಕ್ತವಾದ ನೋಟುಗಳ ವಿನಿಮಯಕ್ಕೆ, ಭಾರತೀಯ ರಿಸರ್ವ್ ಬ್ಯಾಂಕ್ (ನೋಟು ಮರುಪಾವತಿ) ನಿಯಮಗಳ ಅಡಿಯಲ್ಲಿ ಅಧಿಕಾರಗಳನ್ನು ನೀಡಲಾಗಿದೆ.

೨. **ಹರಿದ ನೋಟುಗಳ ಕುರಿತ ಉದಾರಗೊಳಿಸಲಾದ ಪರಿಭಾಷೆ.–** ಶೀಘ್ರ ವಿನಿಮಯ ಸೌಲಭ್ಯಕ್ಕೆ ಅನುಕೂಲ ಕಲ್ಪಿಸುವ ದೃಷ್ಟಿಯಿಂದ, ಈ ಕೆಳಕಂಡ ಬಗೆಯ ಕೊಳಕಾಗಿರುವ ಮತ್ತು ಹರಿದಿರುವ ನೋಟುಗಳನ್ನು ಹಣದ ಭಂಡಾರ ಇಲ್ಲದ ಶಾಖೆಗಳೂ ಸೇರಿದಂತೆ ಎಲ್ಲ ಬ್ಯಾಂಕ್ ಶಾಖೆಗಳು ಮುಕ್ತವಾಗಿ ವಿನಿಮಯ ಮಾಡಿಕೊಳ್ಳತಕ್ಕದ್ದು. ಸರ್ಕಾರಿ ಬಾಕಿಗಳನ್ನು ಸಂದಾಯ ಮಾಡುವಲ್ಲಿ ಮತ್ತು ಸಾರ್ವಜನಿಕರು ಬ್ಯಾಂಕುಗಳಲ್ಲಿ ನಿರ್ವಹಿಸುತ್ತಿರುವ ಖಾತೆಗಳಿಗೆ ಜಮೆ ಮಾಡುವಲ್ಲಿ ಸಹ ಅವುಗಳನ್ನು ಅಂಗೀಕರಿಸತಕ್ಕದ್ದು.

**ಕೊಳಕಾದ ನೋಟುಗಳು**

**ಖ.** <u>**ಏಕ ಸಂಖ್ಯೆಯ ನೋಟುಗಳು– ೧ ರೂ. ೨ ರೂ ಮತ್ತು ೫ ರೂ**</u>

ಸಲ್ಲಿಸಲಾದ ನೋಟು ಎರಡಕ್ಕಿಂತ ಹೆಚ್ಚು ತುಂಡುಗಳಲ್ಲಿರಬಾರದು. ನೋಟಿನ ಯಾವುದೇ ಅತ್ಯಾವಶ್ಯಕ ಲಕ್ಷಣವು ಕಣ್ಮರೆಯಾಗಿರಬಾರದು ಮತ್ತು ಅದರ ಪೂರ್ಣ ಸಂಖ್ಯೆಯು ತುಂಡುಗಳ ಪೈಕಿ ಒಂದು ತುಂಡಿನಲ್ಲಿನ ಅವಿಭಾಜಿತ ಜಾಗದಲ್ಲಿ ಇರಬೇಕು.

**ಖಖ.** <u>**ಎರಡು ಸಂಖ್ಯೆಯ ನೋಟುಗಳು ೧೦ ರೂ, ೨೦ ರೂ, ೫೦ ರೂ, ೧೦೦ ರೂ, ೫೦೦ ರೂ ಮತ್ತು ೧೦೦೦ ರೂ.**</u>

ಸಲ್ಲಿಸಲಾದ ನೋಟು ಎರಡಕ್ಕಿಂತ ಹೆಚ್ಚು ತುಂಡುಗಳಲ್ಲಿರಬಾರದು. ನೋಟಿನ ಯಾವುದೇ ಅತ್ಯಾವಶ್ಯಕ ಲಕ್ಷಣವು ಕಣ್ಮರೆಯಾಗಿರಬಾರದು. ಎರಡೂ ತುಂಡುಗಳು ಒಂದೇ ನೋಟಿನದ್ದಾಗಿರಬೇಕು, ಎಂದರೆ ಪ್ರತಿಯೊಂದು ತುಂಡಿನಲ್ಲಿನ ಅವಿಭಾಜಿತ ಜಾಗದಲ್ಲಿನ ಪೂರ್ಣ ಸಂಖ್ಯೆಯು ಒಂದೇ ಆಗಿರಬೇಕು.

ಮೇಲ್ಕಂಡ ಬಗೆಯ ನೋಟುಗಳನ್ನು ಕೊಳಕಾದ ನೋಟುಗಳೆಂದು ಪರಿಗಣಿಸಲಾಗುವುದು ಮತ್ತು ಅವುಗಳನ್ನು ಕೊಳಕಾದ ನೋಟುಗಳ ಜೊತೆಯಲ್ಲಿ ಇಡಲಾಗುವುದು. ಈ ಯುಕ್ತವಲ್ಲದ ನೋಟುಗಳನ್ನು ಯಾವುದೇ ಕಾರಣದಿಂದಲೂ ಪುನಃ ನೀಡಬಹುದಾದ ನೋಟುಗಳಂತೆ ಸಾರ್ವಜನಿಕರಿಗೆ ನೀಡತಕ್ಕದ್ದಲ್ಲ. ಆದರೆ, ಭಾರತೀಯ ರಿಸರ್ವ್ ಬ್ಯಾಂಕ್ ಕಚೇರಿಗಳಿಗೆ ಭಂಡಾರ ರವಾನೆಗಳಾಗಿ ಮುಂದಕ್ಕೆ ರವಾನಿಸುವುದಕ್ಕಾಗಿ ಅವುಗಳನ್ನು ಕರೆನ್ಸಿ ಭಂಡಾರದಲ್ಲಿ ಇಡತಕ್ಕದ್ದು.

**ವಿಪರೀತ ಹರಿದು ಚೂರಾದ, ಸುಟ್ಟುಹೋದ, ಕರಕಲಾದ, ಅಂಟಿಸಿದ ನೋಟುಗಳು**

ವಿಪರೀತ ಹರಿದು ಚೂರಾಗಿರುವ ಅಥವಾ ಸಾಕಷ್ಟು ಸುಟ್ಟುಹೋಗಿರುವ, ಕರಕಲಾಗಿರುವ ಅಥವಾ ಬೇರ್ಪಡದಂತೆ ಕೂಡಿಸಿ ಅಂಟಿಸಿರುವ ನೋಟುಗಳು ಸಾಮಾನ್ಯ ನಿಬಾವಣೆಯನ್ನು ತಾಳಿಕೊಳ್ಳಲಾರವಾದ್ದರಿಂದ ಅವುಗಳನ್ನು ಬ್ಯಾಂಕುಗಳು ವಿನಿಮಯಕ್ಕೆ ಅಂಗೀಕರಿಸತಕ್ಕದ್ದಲ್ಲ. ಅದಕ್ಕೆ ಬದಲಾಗಿ ಆ ನೋಟುಗಳನ್ನು ಸಂಬಂಧಪಟ್ಟ ನೀಡಿಕೆ ಕಚೇರಿಗಳಿಗೆ ಸಲ್ಲಿಸುವಂತೆ ನೋಟುಗಳನ್ನು ಹೊಂದಿರುವವರಿಗೆ ಸೂಚಿಸಬಹುದು. ಸದರಿ ಕಚೇರಿಗಳಲ್ಲಿ ವಿಶೇಷ ಪ್ರಕ್ರಿಯೆಯ ಅಡಿಯಲ್ಲಿ ಅವುಗಳ ಬಗ್ಗೆ ಕಾನೂನು ಪ್ರಕಾರ ತೀರ್ಮಾನ ತೆಗೆದುಕೊಳ್ಳಲಾಗುವುದು.

೩. **"ಸಂದಾಯ ಮಾಡುವುದು" / " ಸಂದಾಯ ಮಾಡಲಾಗಿದೆ" "ತಿರಸ್ಕರಿಸುವುದು " ಎಂಬ ಮುದ್ರೆಗಳನ್ನು ಹೊಂದಿರುವ ನೋಟುಗಳು**

ಶಾಖೆಯ ಪ್ರಭಾರ ಹೊಂದಿರುವ ಪ್ರತಿಯೊಬ್ಬ ಅಧಿಕಾರಿ, ಎಂದರೆ, ಶಾಖಾ ವ್ಯವಸ್ಥಾಪಕ ಮತ್ತು ಲೆಕ್ಕಪತ್ರಗಳ ಅಥವಾ ಶಾಖೆಯ ನಗದು ವಿಭಾಗದ ಪ್ರಭಾರದಲ್ಲಿರುವ ಪ್ರತಿಯೊಬ್ಬ ಅಧಿಕಾರಿಯು, ಭಾರತೀಯ ರಿಸರ್ವ್ ಬ್ಯಾಂಕ್ (ನೋಟುಗಳ ಮರುಪಾವತಿ) ನಿಯಮಗಳು, ೧೯೭೫ ರ (೧೯೮೦ರವರೆಗೆ ತಿದ್ದುಪಡಿಯಾದಂತೆ) ಅನುಸಾರವಾಗಿ ಶಾಖೆಯಲ್ಲಿ ವಿನಿಮಯಕ್ಕಾಗಿ ಸ್ವೀಕರಿಸಲಾದ ನೋಟುಗಳ ಬಗ್ಗೆ ಕಾನೂನು ಪ್ರಕಾರ ತೀರ್ಮಾನ ತೆಗೆದುಕೊಳ್ಳಲು ಪ್ರತಿಯೊಂದು ಶಾಖೆಯಲ್ಲಿ " ಗೊತ್ತುಪಡಿಸಲಾದ ಅಧಿಕಾರಿ " ಯಾಗಿ ಕಾರ್ಯನಿರ್ವಹಿಸತಕ್ಕದ್ದು. ವಿರೂಪಗೊಂಡ ನೋಟುಗಳ ಬಗ್ಗೆ ತೀರ್ಮಾನ ತೆಗೆದುಕೊಂಡ ತರುವಾಯ, ಗೊತ್ತುಪಡಿಸಲಾದ ಅಧಿಕಾರಿಯು, ದಿನಾಂಕವುಳ್ಳ "ಸಂದಾಯ ಮಾಡುವುದು" / " ಸಂದಾಯ ಮಾಡಲಾಗಿದೆ " / "ತಿರಸ್ಕರಿಸುವುದು" ಎಂಬ ಮುದ್ರೆ ಹಾಕಿ ಚೋಟಾ ಸಹಿ ಮಾಡುವ ಮೂಲಕ ತನ್ನ ಆದೇಶವನ್ನು ದಾಖಲಿಸಬೇಕಾಗುತ್ತದೆ. " ಸಂದಾಯ ಮಾಡುವುದು " ಮತ್ತು "ತಿರಸ್ಕರಿಸುವುದು " ಮುದ್ರೆಗಳಲ್ಲಿ ಸಂಬಂಧಪಟ್ಟ ಬ್ಯಾಂಕಿನ ಮತ್ತು ಶಾಖೆಯ ಹೆಸರು ಸಹ ಇರಬೇಕು. ಯಾವುದೇ ಆರ್‌ಬಿಐ ನೀಡಿಕೆ ಕಚೇರಿಯ ಅಥವಾ ಯಾವುದೇ ಬ್ಯಾಂಕ್ ಶಾಖೆಯ "ಸಂದಾಯ ಮಾಡುವುದು" / " ಸಂದಾಯ ಮಾಡಲಾಗಿದೆ " / (ಅಥವಾ "ತಿರಸ್ಕರಿಸುವುದು") ಎಂಬ ಮುದ್ರೆಯಿರುವ ದೋಷಯುಕ್ತ ನೋಟುಗಳನ್ನು, ಗೊತ್ತುಪಡಿಸಲಾದ ಬ್ಯಾಂಕಿನ ಯಾವುದೇ ಶಾಖೆಗಳಲ್ಲಿ ಹಣ ಸಂದಾಯಕ್ಕಾಗಿ ಮತ್ತೆ ಹಾಜರುಪಡಿಸಿದರೆ, ಆರ್‌ಬಿಐ (ನೋಟು ಮರುಪಾವತಿ) ನಿಯಮಗಳ ೫(೧) ನೇ ನಿಯಮದ ಅನುಸಾರ ಅವುಗಳನ್ನು ತಿರಸ್ಕರಿಸತಕ್ಕದ್ದು. ಮತ್ತು ಅಂಥ (ದೋಷಯುಕ್ತ) ನೋಟಿನ/ಗಳ ಮೇಲೆ ಹಾಕಿರುವ "ಸಂದಾಯ ಮಾಡುವುದು" / "ಸಂದಾಯ ಮಾಡಲಾಗಿದೆ " ಎಂಬ ಮುದ್ರೆಗಳಿಂದ ತಿಳಿದುಬರುವಂತೆ ಆ ನೋಟಿನ/ ನೋಟುಗಳ ಮೌಲ್ಯವನ್ನು ಈಗಾಗಲೇ ಸಂದಾಯ ಮಾಡಿರುವುದರಿಂದ ಸದರಿ ನೋಟಿನ/ಗಳ (ದೋಷಯುಕ್ತ) ಮೌಲ್ಯವನ್ನು ಸಂದಾಯ ಮಾಡಲು ಸಾಧ್ಯವಿಲ್ಲವೆಂದು ಅವುಗಳನ್ನು ಸಲ್ಲಿಸಿದವನಿಗೆ ತಿಳಿಸತಕ್ಕದ್ದು. "ಸಂದಾಯ ಮಾಡುವುದು" / " ಸಂದಾಯ ಮಾಡಲಾಗಿದೆ " ಎಂಬ ಮುದ್ರೆಗಳಿರುವ ನೋಟುಗಳನ್ನು ಕಣ್ತಪ್ಪಿ ಕೂಡ ಸಾರ್ವಜನಿಕರಿಗೆ ನೀಡಬಾರದೆಂದು ಎಲ್ಲ ಬ್ಯಾಂಕ್ ಶಾಖೆಗಳಿಗೆ ಸೂಚನೆ ನೀಡಲಾಗಿದೆ.

ಅಂಥ ನೋಟುಗಳನ್ನು ಯಾವುದೇ ಬ್ಯಾಂಕಿನಿಂದ ಅಥವಾ ಯಾರೇ ವ್ಯಕ್ತಿಯಿಂದ ಸ್ವೀಕರಿಸಬಾರದೆಂದು ಶಾಖೆಗಳು ತಮ್ಮ ಗ್ರಾಹಕರಿಗೆ ಎಚ್ಚರಿಕೆ ನೀಡಬೇಕು.

**೪. ಘೋಷಣೆಗಳು/ ರಾಜಕೀಯ ಸಂದೇಶಗಳನ್ನು ಹೊಂದಿರುವ ನೋಟುಗಳು**

ಯಾವುದೇ ನೋಟಿನ ಮೇಲೆ ರಾಜಕೀಯ ಸ್ವರೂಪದ ಘೋಷಣೆ ಅಥವಾ ಸಂದೇಶವನ್ನು ಬರೆಯಲಾಗಿದ್ದರೆ, ಅದು ಕಾನೂನು ಸಮ್ಮತ ಚಲಾವಣೆ ಹಣವಾಗಿರುವುದು ಕೊನೆಗೊಳ್ಳುತ್ತದೆ ಮತ್ತು ಅಂಥ ನೋಟಿನ ಮೇಲಿನ ಕ್ಲೇಮನ್ನು ಆರ್‌ಬಿಐ (ನೋಟು ಮರುಪಾವತಿ) ನಿಯಮಗಳ ೫(೨) ನೇ ನಿಯಮದ ಅಡಿಯಲ್ಲಿ ನಿರಾಕರಿಸಲಾಗುವುದು. ಹಾಗೆಯೇ ವಿರೂಪಗೊಂಡ ನೋಟುಗಳನ್ನು ಸಹ ಆರ್‌ಬಿಐ (ನೋಟು ಮರುಪಾವತಿ) ನಿಯಮಗಳ ೫(೨) ನೇ ನಿಯಮದ ಅಡಿಯಲ್ಲಿ ನಿರಾಕರಿಸಬಹುದು.

**೫. ಉದ್ದೇಶಪೂರ್ವಕವಾಗಿ ಹರಿದ ನೋಟುಗಳು**

ಉದ್ದೇಶಪೂರ್ವಕವಾಗಿ ಹರಿಯಲಾಗಿದೆ ಅಥವಾ ಕೆಡಿಸಲಾಗಿದೆ ಎಂದು ಕಂಡು ಬರುವ ನೋಟುಗಳನ್ನು ವಿನಿಮಯ ಮೌಲ್ಯದ ಸಂದಾಯಕ್ಕಾಗಿ ಹಾಜರುಪಡಿಸಿದರೆ, ಅವುಗಳನ್ನು ಆರ್‌ಬಿಐ (ನೋಟು ಮರುಪಾವತಿ) ನಿಯಮಗಳ ೫(೨) (ii) ನೇ ನಿಯಮದ ಅಡಿಯಲ್ಲಿ ನಿರಾಕರಿಸತಕ್ಕದ್ದು. ಉದ್ದೇಶಪೂರ್ವಕವಾಗಿ ನೋಟುಗಳನ್ನು ಹರಿಯಲಾಗಿದೆ/ ವಿರೂಪಗೊಳಿಸಲಾಗಿದೆ ಎಂದು ಕರಾರುವಾಕ್ಕಾಗಿ ವ್ಯಾಖ್ಯಾನಿಸಲು ಸಾಧ್ಯವಾಗದಿದ್ದರೂ, ವಿಶೇಷವಾಗಿ ನೋಟುಗಳನ್ನು ಅಧಿಕ ಸಂಖ್ಯೆಗಳಲ್ಲಿ ಸಲ್ಲಿಸಿರುವಾಗ, ಆಕಾರದಲ್ಲಿನ ಏಕರೂಪತೆ/ ನೋಟುಗಳ ಕಣ್ಮರೆಯಾಗಿರುವ ಭಾಗಗಳ ಜಾಗ ಇವುಗಳಿಂದ ಅಂಥ ನೋಟುಗಳನ್ನು ವಿರೂಪಗೊಳಿಸಿರುವ ರೀತಿ ತಿಳಿಯುವುದರಿಂದ ಅಂಥ ನೋಟುಗಳನ್ನು ಗಮನವಿಟ್ಟು ನೋಡಿದಾಗ ಯಾವುದೇ ಉದ್ದೇಶಪೂರ್ವಕವಾದ ಮೋಸದ ಉದ್ದೇಶ ಸ್ಪಷ್ಟವಾಗಿ ಬಹಿರಂಗಗೊಳ್ಳುತ್ತದೆ. ಆ ತರುವಾಯ ನೋಟುಗಳನ್ನು ಸಲ್ಲಿಸುವವನ ಹೆಸರು, ಸಲ್ಲಿಸಲಾದ ನೋಟುಗಳ ಸಂಖ್ಯೆ ಮತ್ತು ನೋಟುಗಳ ವರ್ಗಗಳಂಥ ಪ್ರಕರಣದ ವಿವರಗಳನ್ನು ಆ ಬ್ಯಾಂಕು ಯಾರ ಅಧಿಕಾರ ವ್ಯಾಪ್ತಿಗೊಳಪಡುವುದೋ ಆ ಉಪ/ ಪ್ರಧಾನ ವ್ಯವಸ್ಥಾಪಕ, ನೀಡಿಕೆ ವಿಭಾಗ ಇವರಿಗೆ ವರದಿ ಮಾಡತಕ್ಕದ್ದು. ಅಧಿಕ ಸಂಖ್ಯೆಯಲ್ಲಿ ಅಂಥ ನೋಟುಗಳನ್ನು ಸಲ್ಲಿಸಿರುವ ಸಂದರ್ಭಧಲ್ಲಿ, ಆ ಸಂಗತಿಯನ್ನು ಸ್ಥಳೀಯ ಪೋಲೀಸರಿಗೆ ಸಹ ತಿಳಿಸತಕ್ಕದ್ದು. ಆ ನೋಟು ವಿನಿಮಯ ಸೌಲಭ್ಯವನ್ನು ಖಾಸಗಿ ಹಣ ಪರಿವರ್ತನೆಕಾರರು/ ದೋಷಯುಕ್ತ ನೋಟುಗಳಲ್ಲಿ ವೃತ್ತಿ ನಿರತ ವ್ಯಾಪಾರಿಗಳು ಮೂಲೆಗುಂಪು ಮಾಡಿಲ್ಲ ಎಂಬುದನ್ನು ಖಚಿತಪಡಿಸಿಕೊಳ್ಳತಕ್ಕದ್ದು.

**೬. ತರಬೇತಿ**

ಕರೆನ್ಸಿ ಭಂಡಾರ ಹೊಂದಿರುವ ಶಾಖೆಗಳ "ಗೊತ್ತುಪಡಿಸಲಾದ ಅಧಿಕಾರಿಗಳಿಗೆ" ಆದ್ಯತೆಯ ಆಧಾರದ ಮೇಲೆ ತರಬೇತಿ ಕಾರ್ಯಕ್ರಮಗಳನ್ನು ನಡೆಸಬೇಕೆಂದು ನಮ್ಮ ನೀಡಿಕೆ ಕಚೇರಿಗಳಿಗೆ ಸೂಚನೆಗಳನ್ನು ನೀಡಲಾಗಿದೆ. 'ಗೊತ್ತುಪಡಿಸಲಾದ ಅಧಿಕಾರಿ' ಗಳೆಂದು ಹೆಸರಿಸಲಾಗಿರುವ ಅಧಿಕಾರಿಗಳನ್ನು ಮಾತ್ರ ತರಬೇತಿಗಾಗಿ ನಿಯೋಜಿಸುವಂತೆ ನೋಡಿಕೊಳ್ಳತಕ್ಕದ್ದು. ದೋಷಯುಕ್ತ ನೋಟುಗಳ ಬಗ್ಗೆ ಕಾನೂನು ಪ್ರಕಾರ ತೀರ್ಮಾನ ತೆಗೆದುಕೊಳ್ಳುವ ಪ್ರಕ್ರಿಯೆಯಲ್ಲಿ ಗೊತ್ತುಪಡಿಸಲಾದ ಅಧಿಕಾರಿಗಳಿಗೆ ತಿಳಿವಳಿಕೆಯನ್ನು ನೀಡುವುದು ಮತ್ತು ಅವರಲ್ಲಿ ಭರವಸೆಯನ್ನು ತುಂಬುವುದು ಈ ತರಬೇತಿ ಕಾರ್ಯಕ್ರಮಗಳ ಉದ್ದೇಶವಾಗಿರುವುದರಿಂದ ಸಂಬಂಧಪಟ್ಟ ಶಾಖೆಗಳ ಗೊತ್ತುಪಡಿಸಲಾದ ಅಧಿಕಾರಗಳು ಈ ಕಾರ್ಯಕ್ರಮಗಳಿಗೆ ತಪ್ಪದೆ ಹಾಜರಾಗಬೇಕು.

**೭. ಸೂಚನಾ ಫಲಕದ ಮೇಲೆ ಪ್ರದರ್ಶನ**

ಎಲ್ಲ ಹೆಸರಿಸಲಾದ ಬ್ಯಾಂಕು ಶಾಖೆಗಳು, " ಇಲ್ಲಿ ವಿರೂಪಗೊಂಡ ನೋಟುಗಳನ್ನು ಅಂಗೀಕರಿಸಲಾಗುವುದು ಮತ್ತು ಬದಲಾಯಿಸಿಕೊಡಲಾಗುವುದು" ಎಂಬ ಆಲೇಖದೊಂದಿಗೆ ತಮ್ಮಲ್ಲಿ ನೋಟುಗಳ ವಿನಿಮಯ ಸೌಲಭ್ಯವಿರುವ ಬಗ್ಗೆ ಸೂಚಿಸುವ ಫಲಕವನ್ನು ತಮ್ಮ ಶಾಖೆಯ ಆವರಣದಲ್ಲಿನ ಪ್ರಮುಖ ಸ್ಥಳದಲ್ಲಿ ಪ್ರದರ್ಶಿಸುವಂತೆ ಅಗತ್ಯಪಡಿಸಲಾಗಿದೆ. ಬ್ಯಾಂಕುಗಳು ತಮ್ಮ ಎಲ್ಲ ಹೆಸರಿಸಲಾದ ಶಾಖೆಗಳು ನೋಟು ವಿನಿಮಯ ವ್ಯವಹಾರವನ್ನು ಕೈಗೊಳ್ಳುವಂತೆ ನೋಡಿಕೊಳ್ಳತಕ್ಕದ್ದು.

**೮. ೧೦೦೦ ರೂಪಾಯಿಗಳ ವರ್ಗದ ನೋಟುಗಳನ್ನು ಚಲಾವಣೆಗೆ ಬಿಡುವುದು**

೧೦೦೦ ರೂಪಾಯಿಗಳ ವರ್ಗದ ಬ್ಯಾಂಕು ನೋಟುಗಳನ್ನು ಚಲಾವಣೆಗೆ ತಂದಿರುವುದರಿಂದ, ನೋಟು ಮರುಪಾವತಿ ನಿಯಮಗಳಲ್ಲಿ " ಐದು ನೂರು ರೂಪಾಯಿಗಳು " ಎಂಬ ಪದಗಳು ಕಂಡು ಬರುವೆಡೆಗಳಲ್ಲೆಲ್ಲಾ ಅವುಗಳಿಗೆ ಒಂದು ಸಾವಿರ ರೂಪಾಯಿಗಳು ಎಂಬ ಪದಗಳನ್ನು ಪ್ರತಿಸ್ಥಾಪಿಸಲಾಗಿದೆ ಮತ್ತು " ೫೦೦ " ಎಂಬ ಸಂಖ್ಯೆಯ ತರುವಾಯ " ೧೦೦೦ " ಎಂಬ ಸಂಖ್ಯೆಯನ್ನು ಸೇರಿಸಲಾಗಿದೆ. ಮೇಲ್ಕಂಡ ಸೂಚನೆಯ ಪರಿಣಾಮವೆಂದರೆ, ೫೦೦ ರೂಪಾಯಿಗಳ ವರ್ಗದವರೆಗಿನ ಎರಡು ಕಡೆ ಸಂಖ್ಯೆ ಇರುವ ನೋಟುಗಳ ವಿನಿಮಯಕ್ಕೆ ಅನ್ವಯವಾಗುವ ನಿಯಮಗಳು ಈಗ ೧೦೦೦ ರೂಪಾಯಿಗಳ ವರ್ಗದ ನೋಟುಗಳಿಗೂ ಅನ್ವಯವಾಗುತ್ತದೆ.

ಹೀಗಾಗಿ ೧೦ ರೂ, ೨೦ ರೂ, ೫೦ ರೂ, ೧೦೦ ರೂ ಮತ್ತು ೫೦೦ ರೂಗಳ ಬಗ್ಗೆ ಪ್ರಸ್ತುತ ತೀರ್ಮಾನಿಸುತ್ತಿರುವ ರೀತಿಯಲ್ಲಿಯೇ ಆರ್‌ಬಿಐ (ನೋಟು ಮರುಪಾವತಿ) ನಿಯಮಗಳ ಅಡಿಯಲ್ಲಿ ೧೦೦೦ ರೂಗಳ ವರ್ಗದ ನೋಟುಗಳ ಬಗ್ಗೆಯೂ ತೀರ್ಮಾನ ತೆಗೆದುಕೊಳ್ಳಲಾಗುವುದು.

**೯. ಕರೆನ್ಸಿ ಭಂಡಾರಗಳಲ್ಲಿ ಕಾನೂನು ಪ್ರಕಾರ ತೀರ್ಮಾನಿಸಲಾದ ನೋಟುಗಳ ವಿಲೆ**

ನೀಡಿಕೆ ಕಚೇರಿಗಳ ಅಧಿಕಾರ ವ್ಯಾಪ್ತಿಯಲ್ಲಿ ಬರುವ ಕರೆನ್ಸಿ ಭಂಡಾರಗಳಲ್ಲಿ ಕಾನೂನು ಪ್ರಕಾರ ತೀರ್ಮಾನಿಸಲಾದ ನೋಟುಗಳ ಲೆಕ್ಕಪರಿಶೋಧನೆಗೆ ಸಂಬಂಧಿಸಿದಂತೆ ಪೂರ್ಣ ಮೌಲ್ಯವನ್ನು ಸಂದಾಯ ಮಾಡಲಾಗಿರುವ ನೋಟುಗಳನ್ನು ಕರೆನ್ಸಿ ಭಂಡಾರ ಇರುವ ಶಾಖೆಗಳು ಈಗಾಗಲೇ ನಿರೂಪಿಸಲಾಗಿರುವ ರೀತಿಯಲ್ಲಿ, ಮುಂದಿನ ಕೊಳಕಾದ ನೋಟುಗಳನ್ನು ರವಾನೆ ಮಾಡುವುದರೊಂದಿಗೆ ನೀಡಿಕೆ ಕಚೇರಿಗೆ ರವಾನೆ ಮಾಡಬೇಕಾಗುತ್ತದೆ. ಕರೆನ್ಸಿ ಭಂಡಾರವನ್ನು ನಿರ್ವಹಿಸುವ ಶಾಖೆಯು ತನ್ನ ನಗದು ಶಿಲ್ಕಿನಲ್ಲಿ ಹೊಂದಿರುವ ಅರ್ಧ ಮೌಲ್ಯ ಸಂದಾಯ ಮಾಡಿದ ನೋಟುಗಳನ್ನು ಮತ್ತು ತಿರಸ್ಕರಿಸಲಾದ ನೋಟುಗಳನ್ನು ಪೂರ್ಣ ಮೌಲ್ಯ ಸಂದಾಯ ಮಾಡಿರುವ ನೋಟುಗಳ ಜೊತೆಗೆ ಪ್ರತ್ಯೇಕವಾಗಿ ಪ್ಯಾಕು ಮಾಡಿ ರವಾನೆ ಮಾಡಬಹುದು ಅಥವಾ ಅಗತ್ಯವಾದಾಗ ನೋಂದಾಯಿತ ಅಂಚೆ ಅಥವಾ ವಿಮೆ ಮಾಡಿಸಿದ ಅಂಚೆಯ ಮೂಲಕ ರವಾನೆ ಮಾಡಬಹುದು. ಪೂರ್ಣ ಮೌಲ್ಯ ಸಂದಾಯ ಮಾಡಿರುವ ನೋಟುಗಳನ್ನು ಭಂಡಾರ ರವಾನೆ ಎಂದು ಪರಿಗಣಿಸಲಾಗುವುದು ಮತ್ತು ಈಗ ಇರುವಂತೆ ಪಟ್ಟಿ ಮಾಡಲಾದ ನೋಟುಗಳ ಲೆಕ್ಕದಲ್ಲಿ ಲೆಕ್ಕಕ್ಕೆ ತೆಗೆದುಕೊಳ್ಳಲಾಗುವುದು. ಅರ್ಧಮೌಲ್ಯ ಸಂದಾಯ ಮಾಡಿರುವ ನೋಟುಗಳನ್ನು ಮತ್ತು ತಿರಸ್ಕರಿಸಲಾಗಿರುವ ನೋಟುಗಳನ್ನು ಕ್ಲೇಮುಗಳ ಶಾಖೆಯಲ್ಲಿನ ಸ್ವೀಕೃತಿಯೆಂದು ಪರಿಗಣಿಸಲಾಗುವುದು ಮತ್ತು ಲೆಕ್ಕಕ್ಕೆ ತೆಗೆದುಕೊಳ್ಳಲಾಗುವುದು ಮತ್ತು ತದನುಸಾರವಾಗಿ ಕ್ರಮ ಕೈಗೊಳ್ಳಲಾಗುವುದು.

**೧೦. ಬ್ಯಾಂಕ್ ಶಾಖೆಗಳಲ್ಲಿ ವಿನಿಮಯ ಸೌಲಭ್ಯ**

ದೇಶದ ಎಲ್ಲ ಭಾಗಗಳಲ್ಲಿರುವಂಥ, ಕರೆನ್ಸಿ ಭಂಡಾರ ನಿರ್ವಹಿಸುವಂಥ ಬ್ಯಾಂಕುಗಳ ಎಲ್ಲ ಶಾಖೆಗಳು ಸಾರ್ವಜನಿಕರಿಗೆ ಹೆಚ್ಚು ಕ್ರಿಯಾತ್ಮಕವಾಗಿ ಮತ್ತು ಉತ್ಸಾಹದಿಂದ ಈ ಮುಂದಿನ ಗ್ರಾಹಕ ಸೇವೆಗಳನ್ನು ಒದಗಿಸತಕ್ಕದ್ದು, ಹೀಗೆ ಮಾಡುವುದರಿಂದ ಅವರು ಈ ಉದ್ದೇಶಕ್ಕಾಗಿ ಆರ್‌ಬಿಐ ಪ್ರಾದೇಶಿಕ ಕಚೇರಿಗಳನ್ನು ಸಂಪರ್ಕಿಸುವ ಅಗತ್ಯ ಉಂಟಾಗುವುದಿಲ್ಲ.

(ಎ) ಎಲ್ಲ ವರ್ಗಗಳ ಹೊಸ/ಉತ್ತಮ ಗುಣಮಟ್ಟದ ನೋಟುಗಳಿಗೆ ಮತ್ತು ನಾಣ್ಯಗಳಿಗೆ ಇರುವ ಬೇಡಿಕೆಗಳನ್ನು ಪೂರೈಸುವುದು;

(ಬಿ) ಕೊಳೆಯಾಗಿರುವ ನೋಟುಗಳನ್ನು ಬದಲಾಯಿಸಿಕೊಡುವುದು;

(ಸಿ) ವ್ಯವಹಾರಕ್ಕಾಗಿ ಅಥವಾ ವಿನಿಯಮಕ್ಕಾಗಿ ನಾಣ್ಯಗಳನ್ನು ಮತ್ತು ನೋಟುಗಳನ್ನು ಅಂಗೀಕರಿಸುವುದು.

ಕರೆನ್ಸಿ ಭಂಡಾರಗಳಿರುವ ಎಲ್ಲ ಬ್ಯಾಂಕ್ ಶಾಖೆಗಳು ಹಾನಿಗೊಂಡಿರುವ /ವಿರೂಪಗೊಂಡಿರುವ ನೋಟುಗಳ ವಿನಿಮಯ ಸೌಲಭ್ಯವನ್ನು ಒದಗಿಸತಕ್ಕದ್ದು. ಆರ್‌ಬಿಐ (ನೋಟು ಮರುಪಾವತಿ) ನಿಯಮ, ೧೯೭೫ ರ (೧೯೮೦ರವರೆಗೆ ತಿದ್ದುಪಡಿಯಾದಂತೆ) ಉಪಬಂಧಗಳ ಪ್ರಕಾರ ವಿರೂಪಗೊಂಡ ನೋಟುಗಳ ಬಗ್ಗೆ ತೀರ್ಮಾನಿಸಲಾಗುತ್ತಿದ್ದು, ಅವುಗಳನ್ನು ಆರ್‌ಬಿಐ ವೆಬ್ ಸೈಟ್‌ನಲ್ಲಿ ಪ್ರದರ್ಶಿಸಲಾಗಿದೆ.

ಶಾಖೆಗಳಲ್ಲಿ ಅಂಥ ಸೌಲಭ್ಯಗಳು ದೊರೆಯುವ ಬಗ್ಗೆ ಸಾರ್ವಜನಿಕರ ಮಾಹಿತಿಗಾಗಿ ಪ್ರಕಟಿಸತಕ್ಕದ್ದು.

೧೧ (ಎ) ಕರೆನ್ಸಿ ಭಂಡಾರ/ ಮತ್ತು/ಅಥವಾ ಸಣ್ಣ ನಾಣ್ಯ ಡಿಪೋಗಳ ಸ್ಥಾಪನೆಗಾಗಿ ಭಾರತೀಯ ರಿಸರ್ವ್ ಬ್ಯಾಂಕ್ ಮತ್ತು ವಾಣಿಜ್ಯ ಬ್ಯಾಂಕುಗಳ ನಡುವೆ ಆಗಿರುವ ಒಪ್ಪಂದವು, ಬ್ಯಾಂಕು ಶಾಖೆಗಳು ನಾಣ್ಯಗಳನ್ನು ಸ್ವೀಕರಿಸಿ ಅದಕ್ಕೆ ಬದಲಾಗಿ ನೋಟುಗಳನ್ನು ನೀಡಲು ಉಪಬಂಧ ಕಲ್ಪಿಸುತ್ತದೆ. ತಮ್ಮ ಶಾಖೆಗಳಿಗೆ ಈ ಮುಂದಿನಂತೆ ಸೂಚಿಸಲು ಬ್ಯಾಂಕುಗಳಿಗೆ ಸಲಹೆ ನೀಡಲಾಗಿದೆ:

(i) ಯಾವುದೇ ನಿರ್ಬಂಧವಿಲ್ಲದೆ ಸಾರ್ವಜನಿಕರಿಂದ ಎಲ್ಲ ವರ್ಗಗಳ ನಾಣ್ಯಗಳನ್ನು ಸ್ವೀಕರಿಸಿ, ಅದರ ಮೌಲ್ಯವನ್ನು ನೋಟುಗಳಲ್ಲಿ ಸಂದಾಯ ಮಾಡಬೇಕು.

(ii) ಅಧಿಕ ಪ್ರಮಾಣದ ನಾಣ್ಯಗಳನ್ನು ಸ್ವೀಕರಿಸುವಾಗ, ಎಣಿಕೆ ಯಂತ್ರಗಳನ್ನು ಬಳಸತಕ್ಕದ್ದು ಅಥವಾ ಇದುವರೆಗೆ ಮಾಡುತ್ತಿದ್ದಂತೆ ತೂಕ ಮಾಡುವ ಮೂಲಕ ನಾಣ್ಯಗಳನ್ನು ಅಂಗೀಕರಿಸತಕ್ಕದ್ದು.

(iii) ಸ್ವೀಕರಿಸಲಾದ ರೂಪಾಯಿ ನಾಣ್ಯಗಳನ್ನು ಭಂಡಾರದ ಶಿಲ್ಕಿನ ಒಂದು ಭಾಗವಾಗಿ ಮತ್ತು ಸಣ್ಣ ನಾಣ್ಯಗಳನ್ನು ಸಣ್ಣ ನಾಣ್ಯ ಡಿಪೋದ ಶಿಲ್ಕಿನ ಒಂದು ಭಾಗವಾಗಿ ಇಟ್ಟುಕೊಳ್ಳತಕ್ಕದ್ದು.

(iv) ೫, ೧೦ ಮತ್ತು ೨೦ ಪೈಸೆ ವರ್ಗಗಳ ಸಣ್ಣ ನಾಣ್ಯಗಳನ್ನು ಸಣ್ಣ ನಾಣ್ಯ ಡಿಪೋ ಶಾಖೆಗಳು ಹಾಲಿ ಇರುವ ಗೊತ್ತುಪಡಿಸಲಾದ ಪ್ರಕ್ರಿಯೆಗೆ ಅನುಸಾರವಾಗಿ ನಿಯತಕಾಲಿಕವಾಗಿ ಹೈದರಾಬಾದ್, ಕೋಲ್ಕತ್ತಾ ಮತ್ತು ಮುಂಬಯಿಯಲ್ಲಿರುವ ಭಾರತ ಸರ್ಕಾರದ ಟಂಕಸಾಲೆಗಳಿಗೆ ಕಳುಹಿಸಿಕೊಡತಕ್ಕದ್ದು.

(ಬಿ) ಬ್ಯಾಂಕುಗಳು ತಮ್ಮ ಎಲ್ಲ ಶಾಖೆಗಳಿಗೆ ವಿನಿಮಯಕ್ಕಾಗಿ ಅಥವಾ ಖಾತೆಗಳಲ್ಲಿ ಠೇವಣಿ ಮಾಡುವುದಕ್ಕಾಗಿ ಕೌಂಟರುಗಳಲ್ಲಿ ಸಲ್ಲಿಸಲಾದ ಎಲ್ಲ ವರ್ಗಗಳ ನಾಣ್ಯಗಳನ್ನು ಸ್ವೀಕರಿಸುವಂತೆ ನಿರ್ದೇಶಿಸಲು ಅಗತ್ಯಪಡಿಸಲಾಗಿದೆ. ಅಂಥ ನಾಣ್ಯಗಳನ್ನು ನಿರ್ದಿಷ್ಟವಾಗಿ ಕಡಿಮೆ ವರ್ಗಗಳ ನಾಣ್ಯಗಳನ್ನು ತೂಕ ಮಾಡುವ ಮೂಲಕ ಆದ್ಯತೆ ನೀಡಿ ಸ್ವೀಕರಿಸಬಹುದು. ಆದಾಗ್ಯೂ, ಪ್ರತಿಯೊಂದರಲ್ಲಿ ೧೦೦ ನಾಣ್ಯಗಳಿರುವ ಪಾಲಿಥಿನ್ ಸ್ಯಾಚೆಟ್‌ಗಳಲ್ಲಿ ಪ್ಯಾಕ್ ಮಾಡಲಾಗಿರುವ ನಾಣ್ಯಗಳನ್ನು ಸ್ವೀಕರಿಸಿದರೆ, ಅದರಿಂದ ನಗದು ಗುಮಾಸ್ತನಿಗೆ ಹಾಗೂ ಗ್ರಾಹಕರಿಗೆ ಅನುಕೂಲವಾಗುತ್ತದೆ. ಬ್ಯಾಂಕುಗಳು ಅಥವಾ ಸ್ಯಾಚೆಟ್‌ಗಳನ್ನು ತನ್ನ ಕೌಂಟರುಗಳಲ್ಲಿಟ್ಟುಕೊಂಡಿದ್ದು ಗ್ರಾಹಕರಿಗೆ ಲಭ್ಯವಾಗುವಂತೆ ಮಾಡಬಹುದು. ಈ ಮಟ್ಟಿಗೆ ಒಂದು ನೋಟೀಸನ್ನು ಸಾರ್ವಜನಿಕರ ಮಾಹಿತಿಗಾಗಿ ಶಾಖೆಯ ಆವರಣದ ಒಳಗಡೆ ಹಾಗೂ ಹೊರಗಡೆ ಸೂಕ್ತವಾಗಿ ಪ್ರದರ್ಶಿಸತಕ್ಕದ್ದು. ೫ ಪೈಸೆ, ೧೦ ಪೈಸೆ, ೨೦ ಪೈಸೆ ಅಲ್ಯುಮಿನಿಯಂ ನಾಣ್ಯಗಳನ್ನು ೧೦ ಪೈಸೆಯ ಅಲ್ಯುಮಿನಿಯಂ–ಕಂಚಿನ ನಾಣ್ಯಗಳನ್ನು, ೧೦ ಪೈಸೆಯ ಸ್ಟೇನ್‌ಲೆಸ್ ಸ್ಟೀಲ್ ನಾಣ್ಯಗಳನ್ನು, ೨೫ ಪೈಸೆ, ೫೦ ಪೈಸೆ ಮತ್ತು ಒಂದು ರೂಪಾಯಿ ವರ್ಗದ ಕ್ಯುಪ್ರೋನಿಕ್ಕಲ್ ನಾಣ್ಯಗಳನ್ನು ಹಿಂತೆಗೆದುಕೊಂಡು ಟಂಕಸಾಲೆಗಳಿಗೆ ರವಾನೆ ಮಾಡಿರುವುದನ್ನು ಪರಿಗಣಿಸಿ, ಕೌಂಟರುಗಳಲ್ಲಿ ಸಲ್ಲಿಸುವ ಮುಂಚೆ ಈ ಪ್ರತಿಯೊಂದು ವರ್ಗದ ನಾಣ್ಯಗಳನ್ನು ಪ್ರತ್ಯೇಕವಾಗಿ ಪ್ಯಾಕ್ ಮಾಡುವಂತೆ ಹಾಗೂ ಪ್ರತಿಯೊಂದು ಪೊಟ್ಟಣದಲ್ಲಿ ಲೋಹವಾರಾಗಿ ೧೦೦ ನಾಣ್ಯಗಳು ಇರುವಂತೆ ಪ್ಯಾಕ್ ಮಾಡಿರುವಂತೆ ಗ್ರಾಹಕರಿಗೆ ಮನವಿ ಮಾಡಿಕೊಳ್ಳಬಹುದು. ಆದರೆ ಹಾಗೆ ಒತ್ತಾಯಪಡಿಸಬಾರದು. ಚಾಲ್ತಿಯಲ್ಲಿರುವ ೨೫ ಪೈಸೆಯ, ೫೦ ಪೈಸೆಯ ಮತ್ತು ಒಂದು ರೂಪಾಯಿಯ ಸ್ಟೇನ್ ಲೆಸ್ ಸ್ಟೀಲ್ ನಾಣ್ಯಗಳನ್ನು ಮತ್ತು ಎರಡು ರೂಪಾಯಿ ಹಾಗೂ ಐದು ರೂಪಾಯಿಯ ಕ್ಯುಪ್ರೊ ನಿಕ್ಕಲ್ ನಾಣ್ಯಗಳನ್ನು ಸ್ವೀಕರಿಸುವುದಕ್ಕೂ ಸಹಾ ಅಂಥದೇ ವ್ಯವಸ್ಥೆಯನ್ನು ಮಾಡತಕ್ಕದ್ದು. ತೂಕದಲ್ಲಿ ಹೆಚ್ಚಿನ ವ್ಯತ್ಯಾಸ ಕಂಡುಬಂದ ಸಂದರ್ಭದಲ್ಲಿ ಎಣಿಕೆ ಯಂತ್ರಗಳನ್ನು ಬಳಸಬಹುದು.

ಶಾಖೆಗಳಲ್ಲಿ ನಾಣ್ಯಗಳನ್ನು ಸಂಗ್ರಹಿಸಿಡುವ ಸಮಸ್ಯೆಯನ್ನು ನಿವಾರಿಸುವ ಸಲುವಾಗಿ, ೫ ಪೈಸೆಯ, ೧೦ ಪೈಸೆಯ, ೨೦ ಪೈಸೆಯ ಅಲ್ಯುಮಿನಿಯಂ ನಾಣ್ಯಗಳನ್ನು. ೧೦ ಪೈಸೆಯ ಅಲ್ಯುಮಿನಿಯಂ–ಕಂಚು ನಾಣ್ಯಗಳನ್ನು, ೧೦ ಪೈಸೆಯ ಸ್ಟೇನ್ ಲೆಸ್ ಸ್ಟೀಲ್ ನಾಣ್ಯಗಳನ್ನು ಮತ್ತು ೨೫ ಪೈಸೆಯ, ೫೦ ಪೈಸೆಯ ಮತ್ತು ೧ ರೂಪಾಯಿಯ ಕ್ಯುಪ್ರೊನಿಕಲ್ ನಾಣ್ಯಗಳನ್ನು ಹಾಲಿ ಇರುವ ಕಾರ್ಯವಿಧಾನದ ಪ್ರಕಾರ ಕರೆನ್ಸಿ ಭಂಡಾರದ ಮೂಲಕ ಮತ್ತು ನಿಮ್ಮ ಬ್ಯಾಂಕಿನ ಸಣ್ಣ ನಾಣ್ಯಗಳ ಡಿಪೋ ಶಾಖೆಗಳ ಮೂಲಕ (ಅಥವಾ ಇತರ ಬ್ಯಾಂಕುಗಳ ಸಂಪರ್ಕ ಕರೆನ್ಸಿ ಭಂಡಾರ ಮತ್ತು ಸಣ್ಣ ನಾಣ್ಯ ಡಿಪೋ ಶಾಖೆಗಳ ಮೂಲಕ) ಮುಂಬಯಿ/ ಕೋಲ್ಕತ್ತಾ/ ಹೈದರಾಬಾದ್‌ನಲ್ಲಿರುವ ಭಾರತ ಸರ್ಕಾರದ ಟಂಕಸಾಲೆಗಳಿಗೆ, ಅವುಗಳಿಗೆ ಮೊದಲೇ ತಿಳಿಸಿ, ಇರಸಾಲು ಮಾಡಬಹುದು. ಆದರೆ, ೨೫ ಪೈಸೆಯ, ೫೦ ಪೈಸೆಯ ಮತ್ತು ೧ ರೂಪಾಯಿಯ ಸ್ಟೇನ್‌ಲೆಸ್ ಸ್ಟೀಲ್ ನಾಣ್ಯಗಳನ್ನು ಮತ್ತು ೨ ರೂಪಾಯಿ ಹಾಗೂ ೫ ರೂಪಾಯಿಯ ವರ್ಗದ ಕ್ಯುಪ್ರೊನಿಕಲ್ ನಾಣ್ಯಗಳನ್ನು ಚಲಾವಣೆಗೆ ಮತ್ತೆ ಬಿಡತಕ್ಕದ್ದು. ಈ ನಾಣ್ಯಗಳ ದಾಸ್ತಾನು, ಬೇಡಿಕೆಯ ಕೊರತೆಯಿಂದಾಗಿ ಕರೆನ್ಸಿ ಭಂಡಾರದ/ಸಣ್ಣ ನಾಣ್ಯ ಡಿಪೋದ ಧಾರಣ ಸಾಮರ್ಥ್ಯವನ್ನು ಮೀರುವ ಮಟ್ಟವನ್ನು ತಲುಪಿದ ಸಂದರ್ಭದಲ್ಲಿ, ನಾಣ್ಯಗಳನ್ನು ರವಾನೆ ಮಾಡುವುದಕ್ಕಾಗಿ ಆ ವೃತ್ತದ ನೀಡಿಕೆ ಇಲಾಖೆಯನ್ನು ಸಂಪರ್ಕಿಸತಕ್ಕದ್ದು.

ಬ್ಯಾಂಕುಗಳ ಪ್ರಾದೇಶಿಕ ವ್ಯವಸ್ಥಾಪಕರು/ ವಲಯ ವ್ಯವಸ್ಥಾಪಕರು ಶಾಖೆಗಳಿಗೆ ಅನಿರೀಕ್ಷಿತ ಭೇಟಿ ನೀಡಿ ಈ ಸಂಬಂಧದಲ್ಲಿ ಪಾಲನೆಯ ಸ್ಥಿತಿಯ ಬಗ್ಗೆ ಕೇಂದ್ರ ಕಚೇರಿಗೆ ವರದಿ ಮಾಡುವುದು. ಕೇಂದ್ರ ಕಚೇರಿಯು ಅಂಥ ವರದಿಯನ್ನು ಪರಿಶೀಲಿಸಿ, ಅವಶ್ಯವಿರುವಾಗ ಕಟ್ಟುನಿಟ್ಟಿನ ಪರಿಹಾರ ಕ್ರಮವನ್ನು ಕೈಗೊಳ್ಳುತ್ತದೆ.

ಈ ಸಂಬಂಧದಲ್ಲಿನ ಯಾವುದೇ ಅನನುಪಾಲನೆಯನ್ನು ಭಾರತೀಯ ರಿಸರ್ವ್ ಬ್ಯಾಂಕ್ ನೀಡಿದ ಸೂಚನೆಗಳ ಉಲ್ಲಂಘನೆ ಎಂದು ಪರಿಗಣಿಸಲಾಗುವುದು.

**ಅನುಬಂಧ**

**ಪ್ರಧಾನ ಸುತ್ತೋಲೆ**

**ವಿಷಯ: ಭಾರತೀಯ ರಿಸರ್ವ್ ಬ್ಯಾಂಕ್ (ನೋಟು ಮರುಪಾವತಿ) ನಿಯಮಗಳು– ಅಧಿಕಾರಗಳ ಪ್ರತ್ಯಾಯೋಜನೆ**

**ಪ್ರಧಾನ ಸುತ್ತೋಲೆಯ ಮೂಲಕ ಕ್ರೋಢೀಕರಿಸಲಾದ ಸುತ್ತೋಲೆಗಳ ಪಟ್ಟಿ**

| ಸುತ್ತೋಲೆ ಸಂಖ್ಯೆ | ದಿನಾಂಕ | ವಿಷಯ |
|---|---|---|
| ಜಿ–೬೭/೦೮.೦೭.೧೮/೯೬–೯೭ | ೧೮.೨.೧೯೯೭ | ಆರ್‌ಬಿಐ (ನೋಟು ಮರುಪಾವತಿ) ನಿಯಮಗಳು, ೧೯೭೫–ಕರೆನ್ಸಿ ಭಂಡಾರಗಳನ್ನು ನಿರ್ವಹಿಸುತ್ತಿರುವ ಖಾಸಗಿ ವಲಯದ ಬ್ಯಾಂಕುಗಳಿಗೆ ಪೂರ್ಣ ಅಧಿಕಾರಗಳ ನೀಡಿಕೆ |
| ಜಿ–೫೨/೦೮.೦೭.೧೮/೯೬–೯೭ | ೧೧.೧.೧೯೯೭ | ಆರ್‌ಬಿಐ (ನೋಟು ಮರುಪಾವತಿ) ನಿಯಮಗಳು– ದೋಷಯುಕ್ತ ನೋಟುಗಳ ವಿನಿಮಯ ಮಾಡಲು ಪಿಎಸ್‌ಬಿ ಗಳಿಗೆ ಅಧಿಕಾರಗಳ ನೀಡಿಕೆ ಯೋಜನೆ–ಸಂದಾಯ ಮಾಡುವುದು/ಸಂದಾಯ ಮಾಡಲಾಗಿದೆ ಮುದ್ರೆ ಹೊಂದಿರುವ ನೋಟುಗಳ ವಿಲೇವಾರಿ. |
| ಜಿ–೨೪/೦೮.೦೧.೦೧/೯೬–೯೭ | ೩.೧೨.೧೯೯೬ | ಹರಿದ ನೋಟುಗಳ ಅಂಗೀಕಾರ ಮತ್ತು ವಿನಿಮಯ– ಉದಾರೀಕರಣ |
| ಜಿ–೬೪/೦೮.೦೭.೧೮/೯೫–೯೬ | ೧೮.೫.೧೯೯೬ | ಆರ್‌ಬಿಐ (ನೋಟು ಮರುಪಾವತಿ) ನಿಯಮಗಳು– ಪಿಎಸ್‌ಬಿಗಳ ಶಾಖೆಗಳಿಗೆ ಪೂರ್ಣ ಅಧಿಕಾರಗಳ ನೀಡಿಕೆ ಮತ್ತು ದೋಷಯುಕ್ತ ನೋಟುಗಳ ವಿನಿಮಯದ ಬಗ್ಗೆ ಪ್ರಚಾರ |
| ಜಿ–೭೧/೦೮.೦೭.೧೮ ೯೨–೯೩ | ೨೨.೬.೧೯೯೩ | ಆರ್‌ಬಿಐ (ನೋಟು ಮರುಪಾವತಿ) ನಿಯಮಗಳು– ಪಿಎಸ್‌ಬಿಗಳ ಶಾಖೆಗಳಿಗೆ ದೋಷಯುಕ್ತ ನೋಟುಗಳ ವಿನಿಮಯಕ್ಕೆ ಪೂರ್ಣ ಅಧಿಕಾರಗಳ ನೀಡಿಕೆ ಯೋಜನೆ–ಪ್ರಚಾರ |
| ಜಿ–೮೩/ಸಿಎಲ್–೧(ಪಿಎಸ್‌ಬಿ)–೯೧/೯೨ | ೦೬.೫.೧೯೯೨ | ಆರ್‌ಬಿಐ (ನೋಟು ಮರುಪಾವತಿ) ನಿಯಮಗಳು– ಪಿಎಸ್‌ಬಿಗಳ ಭಂಡಾರವಿರುವ ಶಾಖೆಗಳಿಗೆ ಅಧಿಕಾರಗಳ ನೀಡಿಕೆ. |
| ಜಿ–೭೪/ಸಿಎಲ್–(ಪಿಎಸ್‌ಬಿ) | ೦೫.೬.೧೯೯೧ | ಆರ್‌ಬಿಐ (ನೋಟು ಮರುಪಾವತಿ) ನಿಯಮಗಳು– |

| | | |
|---|---|---|
| (ಜನರಲ್)೯೦–೯೧ | | ಅವುಗಳ ಅಡಿಯಲ್ಲಿ ಪಿಎಸ್‌ಬಿಗಳಿಗೆ ಪೂರ್ಣ ಅಧಿಕಾರಗಳ ನೀಡಿಕೆ |
| ೫.೫/ಸಿಎಲ್–೧ (ಪಿಎಸ್‌ಬಿ) ೯೦–೯೧ | ೨೫.೯.೧೯೯೦ | ಆರ್‌ಬಿಐ (ನೋಟು ಮರುಪಾವತಿ) ನಿಯಮಗಳು– ಪಿಎಸ್‌ಬಿಗಳಿಗೆಪೂರ್ಣ ಅಧಿಕಾರಗಳ ನೀಡಿಕೆ ಯೋಜನೆ |
| ೮/ಸಿಎಲ್–೧ (ಪಿಎಸ್‌ಬಿ)–೯೦/೯೧ | ೧೭.೮.೧೯೯೦ | ಆರ್‌ಬಿಐ (ನೋಟು ಮರುಪಾವತಿ) ನಿಯಮಗಳು– ಪಿಎಸ್‌ಬಿಗಳಿಗೆ ಪೂರ್ಣ ಅಧಿಕಾರಗಳ ನೀಡಿಕೆ ಯೋಜನೆ |

| ಸುತ್ತೋಲೆ ಸಂಖ್ಯೆ | ದಿನಾಂಕ | ವಿಷಯ |
|---|---|---|
| ಜಿ–೧೨೩/ಸಿಎಲ್–೧(ಪಿಎಸ್‌ಬಿ)(ಜನರಲ್)೮೯–೯೦ | ೦೭.೫.೧೯೯೦ | ಆರ್‌ಬಿಐ (ನೋಟು ಮರುಪಾವತಿ) ನಿಯಮಗಳು– ಪಿಎಸ್‌ಬಿಗಳಿಗೆ ಪೂರ್ಣ ಅಧಿಕಾರಗಳ ನೀಡಿಕೆ ಯೋಜನೆ (ತಿದ್ದುಪಡಿ) |
| ಜಿ–೧೦೮/ಸಿಎಲ್–೧(ಪಿಎಸ್‌ಬಿ)(ಜನರಲ್)೮೯–೯೦ | ೦೩.೪.೧೯೯೦ | ಆರ್‌ಬಿಐ (ನೋಟು ಮರುಪಾವತಿ) ನಿಯಮಗಳು, ೧೯೮೯– ೫೦೦ ರೂಪಾಯಿಗಳ ವರ್ಗದ ಬ್ಯಾಂಕ್ ನೋಟುಗಳು–ಪಿಎಸ್‌ಬಿಗಳ ಶಾಖೆಗಳಲ್ಲಿ ದೋಷಯುಕ್ತ ನೋಟುಗಳ ವಿನಿಮಯ. |
| ಜಿ–೮/ಸಿಎಲ್–೧ (ಪಿಎಸ್‌ಬಿ)–೮೯–೯೦ | ೧೨.೭.೧೯೮೯ | ಆರ್‌ಬಿಐ (ನೋಟು ಮರುಪಾವತಿ) ನಿಯಮಗಳು– " ಕ್ಲೇಮುಗಳಿಗೆ " ಎಂದು ಆರ್‌ಬಿಐ ನೀಡಿಕೆ ಕಚೇರಿಗಳು ಮುದ್ರೆ ಹಾಕಿರುವ ದೋಷಯುಕ್ತ ನೋಟುಗಳು |
| ಜಿ.೮೪/ಸಿಎಲ್–೧ (ಪಿಎಸ್‌ಬಿ)–೮೮–೮೯ | ೧೭.೩.೧೯೮೯ | ಆರ್‌ಬಿಐ (ನೋಟು ಮರುಪಾವತಿ) ನಿಯಮಗಳು, ಪಿಎಸ್‌ಬಿಗಳಿಗೆ ನೋಟುಗಳನ್ನು ವಿನಿಮಯ ಮಾಡುವ ಪೂರ್ಣ ಅಧಿಕಾರಗಳ ನೀಡಿಕೆ. |
| ಜಿ.೬೬/ಸಿಎಲ್–೧ (ಪಿಎಸ್‌ಬಿ)–೮೮–೮೯ | ೦೯.೨.೧೯೮೯ | ಆರ್‌ಬಿಐ (ನೋಟು ಮರುಪಾವತಿ) ನಿಯಮಗಳು– ಪಿಎಸ್‌ಬಿಗಳಿಗೆ ಅಧಿಕಾರಗಳ ನೀಡಿಕೆ–ತರಬೇತಿ. |
| ಎಸ್.೧೨/ಸಿಎಲ್–೧ (ಪಿಎಸ್‌ಬಿ)–೮೮–೮೯ | ೩೦.೯.೧೯೮೮ | ಆರ್‌ಬಿಐ (ನೋಟು ಮರುಪಾವತಿ) ನಿಯಮಗಳು– ಉದ್ದೇಶಪೂರ್ವಕವಾಗಿ ವಿರೂಪಗೊಳಿಸಿದ ನೋಟುಗಳ ಬಗ್ಗೆ ಕಾನೂನು ಪ್ರಕಾರ ತೀರ್ಮಾನ ತೆಗೆದುಕೊಳ್ಳುವುದು. |
| ಜಿ.೧೩೪/ಸಿಎಲ್–೧ (ಪಿಎಸ್‌ಬಿ)–೮೭–೮೮ | ೨೫.೫.೧೯೮೮ | ಆರ್‌ಬಿಐ (ನೋಟು ಮರುಪಾವತಿ) ನಿಯಮಗಳ ಅಡಿಯಲ್ಲಿ ಪೂರ್ಣ ಅಧಿಕಾರಗಳನ್ನು ನೀಡುವ ಯೋಜನೆಯ ಅನುಷ್ಠಾನ. |
| ೧೯೨/ಸಿಎಲ್–೧ (ಪಿಎಸ್‌ಬಿ)–೮೬–೮೭ | ೦೨.೬.೧೯೮೭ | ಆರ್‌ಬಿಐ (ನೋಟು ಮರುಪಾವತಿ) ನಿಯಮಗಳು– ಪಿಎಸ್‌ಬಿಗಳಿಗೆ ಪೂರ್ಣ ಅಧಿಕಾರಗಳನ್ನು ನೀಡುವ ಯೋಜನೆ. |
| ೧೮೯/ಸಿಎಲ್–೨/೮೬/೮೭ | ೦೨.೬.೧೯೮೭ | ಕರೆನ್ಸಿ ನೋಟುಗಳ ಮೇಲೆ ಬರೆಯುವ ಮೂಲಕ ಅಥವಾ ಅವುಗಳ ಮೇಲೆ ಸಂದೇಶಗಳು, ಘೋಷಣೆಗಳು ಮುಂತಾದವುಗಳನ್ನು ಬರೆಯುವ ಮೂಲಕ ಅವುಗಳನ್ನು ವಿರೂಪಗೊಳಿಸುವುದು. |

| | | |
|---|---|---|
| ೧೮೫/ಸಿಎಲ್–೧ (ಪಿಎಸ್‌ಬಿ)–೮೬–೮೭ | ೨೦.೫.೧೯೮೭ | ಆರ್‌ಬಿಐ (ನೋಟು ಮರುಪಾವತಿ) ನಿಯಮಗಳು– ದೋಷಯುಕ್ತ ನೋಟುಗಳ ಮೇಲೆ "ಸಂದಾಯ ಮಾಡುವುದು " ಮತ್ತು " ತಿರಸ್ಕರಿಸುವುದು " ಮುದ್ರೆಗಳನ್ನು ಹಾಕುವುದು.. |
| ೧೭೩/ಸಿಎಲ್.೧/೮೪/೮೫ | ೨.೪.೧೯೮೫ | ದೋಷಯುಕ್ತ ನೋಟುಗಳ ವಿನಿಮಯಕ್ಕಾಗಿ ಪಿಎಸ್‌ಬಿಗಳಿಗೆ ಪೂರ್ಣ ಅಧಿಕಾರಗಳ ನೀಡಿಕೆ/ ಅದರ ಕಾರ್ಯವಿಧಾನ |

| ಸುತ್ತೋಲೆ ಸಂಖ್ಯೆ | ದಿನಾಂಕ | ವಿಷಯ |
|---|---|---|
| ಸಿವೈ ಸಂಖ್ಯೆ.೧೦೬೪/ಸಿಎಲ್.೧ ೭೬/೭೭ | ೦೯.೮.೧೯೭೬ | ಕೊಳಕಾದ ನೋಟುಗಳು ಮತ್ತು ಸ್ವಲ್ಪ ಮಾತ್ರ ವಿರೂಪವಾಗಿರುವ ನೋಟುಗಳನ್ನು ವಿನಿಮಯ ಮಾಡಿಕೊಳ್ಳಲು ಸಾರ್ವಜನಿಕರಿಗೆ ಸೌಲಭ್ಯಗಳು. |
| ಸಿವೈ.ಸಂಖ್ಯೆ.೩೮೬/೦೮.೦೭.೧೩/೨೦೦೦–೨೦೦೧ | ೧೬.೧೧.೨೦೦೦ | ಭಾರತೀಯ ರಿಸರ್ವ್ ಬ್ಯಾಂಕ್ (ನೋಟು ಮರುಪಾವತಿ) ನಿಯಮಗಳು, ೧೯೭೫–ಸಾರ್ವಜನಿಕ /ಖಾಸಗಿ ವಲಯದ ಬ್ಯಾಂಕಿನ ಕರೆನ್ಸಿ ಭಂಡಾರವಿರುವ ಶಾಖೆಗಳಿಗೆ ನೋಟುಗಳನ್ನು ವಿನಿಮಯ ಮಾಡುವ ಪೂರ್ಣ ಅಧಿಕಾರಗಳ ನೀಡಿಕೆ |
| ಜಿ–೧೧/೦೮.೦೭.೧೮/೨೦೦೧–೦೨ | ೦೨.೧೧.೨೦೦೧ | ಭಾರತೀಯ ರಿಸರ್ವ್ ಬ್ಯಾಂಕ್ (ನೋಟು ಮರುಪಾವತಿ) ನಿಯಮಗಳು, ೧೯೭೫–ಸಾರ್ವಜನಿಕ /ಖಾಸಗಿ ವಲಯದ ಬ್ಯಾಂಕಿನ ಕರೆನ್ಸಿ ಭಂಡಾರವಿರುವ ಶಾಖೆಗಳಿಗೆ ನೋಟುಗಳನ್ನು ವಿನಿಮಯ ಮಾಡುವ ಪೂರ್ಣ ಅಧಿಕಾರಗಳ ನೀಡಿಕೆ |
| ಡಿಸಿಎಂ (ಆರ್‌ಎಂಎಂಟಿ) ಸಂಖ್ಯೆ. ೪೦೪/೧೧.೩೭.೦೧/೨೦೦೩–೦೪ | ೦೯.೧೦.೨೦೦೩ | ನಾಣ್ಯಗಳ ಸ್ವೀಕಾರ ಮತ್ತು ನೋಟುಗಳ ಲಭ್ಯತೆ |
| ಡಿಸಿಎಂ (ಎನ್‌ಇ) ಸಂಖ್ಯೆ. ೩೧೦/೦೮.೦೭.೧೮/೨೦೦೩–೦೪ | ೧೯.೦೧.೨೦೦೪ | ನೋಟುಗಳು, ನಾಣ್ಯಗಳು ಮುಂತಾದವುಗಳ ವಿನಿಮಯಕ್ಕಾಗಿ ಸಾರ್ವಜನಿಕರಿಗೆ ಸೌಲಭ್ಯಗಳನ್ನು ಕಲ್ಪಿಸುವುದು |
| ಡಿಸಿಎಂ (ಆರ್‌ಎಂಎಂಟಿ) ಸಂಖ್ಯೆ. ೧೧೮೧/೧೧.೩೭.೦೧/೨೦೦೩–೦೪ | ೦೫.೦೪.೨೦೦೪ | ನಾಣ್ಯಗಳ ಸ್ವೀಕಾರ |